ಅಸಲು ದಾವಾ ನಂ.148/2023
ಪಿ ಡಬ್ಲ್ಯು -1

ದಿನಾಂಕಃ 14-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ-** ವಾದಿ ಪರ ಶ್ರೀ **. ಎಸ್ ಎಮ್ ಆರ್** ವಕೀಲರಿಂದ **.**

ನಾನು ನನ್ನ ಮುಖ್ಯ ವಿಚಾರಣೆಯ ಭಾಗಾಂಶವಾಗಿ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಸಂಗತಿಗಳು ಸರಿಯಾಗಿರುತ್ತವೆ.

ಸರ್ವೆ ನಂ.76/1ಕ ಇದರ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-1 ಎಂದು, ಸರ್ವೆ ನಂ.76/1ಕ ಇದರ 2 ಕೈ ಬರಹ ಪಹಣಿಗಳ ದೃಢೀಕೃತ ನಕಲುಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು ನಿಪಿ-3 ಎಂದು, ಆಸ್ತಿ ಸಂಖ್ಯೆಃ 34 ರ ಕರಾಕರಣೆಯ ಯಾದಿ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-4 ಎಂದು, ದಿನಾಂಕ 27-03-1972 ರ ಖರೀದಿ ಪತ್ರದ ಮೂಲ ಪ್ರತಿ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-5 ಎಂದು, ದತ್ತಕ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-6 ಎಂದು, ನನ್ನ ಗಂಡ ಮಹಾದೇವಪ್ಪ, ನನ್ನ ಮಗಳು ಸುಜಾತಾ, ಸಂಗೀತಾ, ಸಾವಕ್ಕಾ ಮತ್ತು ನಿಂಗಮ್ಮ ಇವರುಗಳ ಶಾಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-7 ರಿಂದ ನಿಪಿ-11 ಎಂದು, ವಂಶವೃಕ್ಷದ ದೃಢೀಕರಣ ಪತ್ರ ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-12 ಎಂದು, ತಹಶೀಲ್ದಾರ, ಸವಣೂರ ಇವರು ನೀಡಿದ 2 ಹಿಂಬರಹಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-13 ಮತ್ತು ನಿಪಿ-14 ಎಂದು, ನನ್ನ ಗಂಡ ಮಹಾದೇವಪ್ಪ ಹಾಗೂ ಮಾವ ಯಲ್ಲಪ್ಪ ಇವರ ಮರಣ ಪ್ರಮಾಣಪತ್ರಗಳನ್ನು ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-15 ಮತ್ತು ನಿಪಿ-16 ಎಂದು, ಸರ್ವೆ ನಂ.46/2ಎ ಇದರ

ಕೈಬರಹ ಪಹಣಿಯ ದೃಢೀಕೃತ ನಕಲು ಹಾಗೂ ಗಣಕೀಕೃತ ಪಹಣಿ ಹಾಜರುಪಡಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿಪಿ-17 ಮತ್ತು ನಿಪಿ-18 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಕೋರಲಾದಂತೆ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲು ಪ್ರಾರ್ಥಿಸುತ್ತೇನೆ.

**ಪಾಟಿ ಸವಾಲುಃ-** ಪ್ರತಿವಾದಿ ಪರ ಶ್ರೀ.ಎ ಎಸ್ ಡಿ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗೆ ಅಂತಿಮ ಮುದ್ದತ್ತು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).